**ದಿಃ 20-11-2023 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ ಃ-**

ಈ ಹಿಂದೆ ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರ ದಲ್ಲಿ ಕಾಣಿಸಿದಂತೆ 26-10-2018 ರಂದು ಅಪಘಾತ ಆಗಿದೆ ಎಂದು ಹೇಳಿದ್ದು ಆದರೆ ನಾನು ಪುನಃ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಕಾಣಿಸಿದ ಪ್ರಕಾರ 26-06-2018 ರಂದು ಅಪಘಾತ ಆಗಿದೆ ಎಂದು ನುಡಿಯುತ್ತಾರೆ. ಪೊಲೀಸರು ತನಿಖೆ ಮಾಡಿ ಸಲ್ಲಿಸಿರುವ ದೊಷಾರೋಪಣ ಪಟ್ಟಿಯಲ್ಲಿ ಅಪಘಾತ 26-08-2018 ಎಂದು ಅಪಘಾತ ಆಗಿದೆ ಎಂದು ಕಾಣಿಸಿದ್ದಾರೆ ಎಂದರೆ ಸರಿ. ಈ ರೀತಿ ದೋಷಾರೋಪಣ ಪಟ್ಟಿಯಲ್ಲಿ ಕಾಣಿಸಿರುವ ದಿನಾಂಕ ತಪ್ಪಾಗಿದೆ ಎಂದು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ.

ಟ್ರಾಕ್ಟರ್ ಮತ್ತು ಟ್ರೈಲರ್ ನೊಂದಣಿ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಟ್ರೈಲರ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. 2 ನೇ ಎದುರುದಾರರು ಟ್ರಾಕ್ಟರ ಚಾಲಕ ಯಾವುದೇ ಮುನ್ಸೂಚನೆ ನೀಡದೆ ಅಜಾಗರೂಕತೆಯಿಂದ ಚಾಲನೆ ಮಾಡಿದನು ಎಂದು ಹೇಳಿದ್ದು ಚಾಲಕನ ಹೆಸರು ನನಗೆ ಹೇಳಲಾಗುವುದಿಲ್ಲ. ಟ್ರಾಕ್ಟರ ಯಾರು ಆ ದಿನ ಚಲಾಯಿಸುತಿದ್ದರು ಎಂದು ನನ್ನ ಮಗನಿಗೆ ಗೊತ್ತಿದೆ ಎಂದರೆ ಇರಬಹುದು ಆತನನ್ನೇ ಕೇಳಬೇಕು ಎಂದು ನುಡಿಯುತ್ತಾರೆ. 1 ನೇ ಎದುರುದಾರರ ವಾಹನ ಅಪಘಾತದಲ್ಲಿ ಬಾಗಿಯಾಗಿಲ್ಲದಿದ್ದರೂ ಸಹ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೂ 1 ನೇ ಎದುರುದಾರರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕೊನೆಯದಾಗಿ ಅವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ